ಅವರು ಹಿಂತಿರುಗಿ ನೋಡುವ ಪ್ರಸಂಗವೇ ಬರಲಿಲ್ಲ. ತಮ್ಮ ಕಾವ್ಯ ವಿಮರ್ಶಕರ ಮನ್ನಣೆ ಪಡೆಯಬೇಕು ಎಂಬ ಅಪೇಕ್ಷೆಯೂ ಅವರಿಗಿರಲಿಲ್ಲ. ‘ನವರಸ’, ‘ಉದಯಗೀತ’, ‘ಗುಬ್ಬಿಯ ಗೂಡು’, ‘ಗೀತಮಂಜರಿ’, ‘ನಲ್ಲೆಯೊರಿಗೆ’, ‘ಆಕಾಶಕಿರಣ’, ‘ಡೋಣಿಯ ಆಟ’, ‘ದೂರ ದಿಗಂತದಿ’ ಹೀಗೆ ಹಲವಾರು ಕವನ ಸಂಕಲನಗಳನ್ನು ತಮ್ಮದೇ ಪ್ರಕಾಶನದ ಮೂಲಕ ಪ್ರಕಟಿಸಿ ಸೈಕಲ್ ಮೇಲೆಯೇ ಅವುಗಳನ್ನು ಸಾರ್ವಜನಿಕರಿಗೆ ತಲುಪಿಸುವ ಪ್ರಯತ್ನ ಮಾಡಿದರು. ಗಳಗನಾಥರು ಕಾದಂಬರಿಗಳನ್ನು ತಮ್ಮ ತಲೆಯ ಮೇಲೆ ಹೊತ್ತು ಮಾರಿದಂತೆ ಇವರು ಸೈಕಲ್ ಕ್ಯಾರಿಯರ್ ಮೇಲೆ ಅವುಗಳನ್ನು ಒಯ್ದರು, ಸಹೃದಯರಿಗೆ ಒಪ್ಪಿಸಿದರು.

ತಡವಾಗಿಯಾದರೂ ಅವರಿಗೆ ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯಗಳ ಗೌರವಗಳು ಸಿಕ್ಕವು. ಪ್ರಶಸ್ತಿ ಮತ್ತು ಸನ್ಮಾನಗಳ ಹಪಹಪಿ ಅವರಿಗೆ ಇರಲಿಲ್ಲ. ಧಾರವಾಡದ ಲೇಖಕ, ಪ್ರಕಾಶಕ ಡಾ. ಶಿವಾನಂದ ಗಾಳಿ ಅವರು ಐರಸಂಗರ ಸಮಗ್ರ ಕವಿತೆಗಳನ್ನು 2014ರಲ್ಲಿ ಪ್ರಕಟಿಸುವ ಮೂಲಕ ಈ ಕವಿ ಮತ್ತಷ್ಟು ಬೆಳಕಿಗೆ ಬರುವಂತೆ ನೋಡಿಕೊಂಡರು. ಮೋಹನ ನಾಗಮ್ಮನವರ, ಲಿಂಗರಾಜ ಅಂಗಡಿ ಮುಂತಾದವರು ಈ ಕವಿಯ ಬೆನ್ನಿಗೆ ನಿಂತಿದ್ದರಿಂದ ಇವರು ಅಷ್ಟೋ ಇಷ್ಟೋ ಸಾಹಿತ್ಯ ಗೌರವವನ್ನು ಪಡೆಯುವಂತಾಯಿತು ಎನ್ನಬೇಕು. ಆದರೆ ಸಾವಿರಾರು ಸಹೃದಯರ ಮನಸ್ಸಿನಲ್ಲಿ ಅವರ ಗೀತೆಗಳು ಇದ್ದೇಇದ್ದವು. 'ಗೀತವೆನ್ನ ಜೀವನಾ, ಪ್ರೀತಿ ಎನ್ನ ಭಾವನಾ' ಎಂಬ ಅವರ ಮೊದಲ ಕವನ ಸಂಕಲನದಲ್ಲಿನ ಹಾಡು ಅವರ ಬದುಕಿನುದ್ದಕ್ಕೂ ಅನುರಣಿಸುತ್ತಲೇ ಇತ್ತು. ವಸಂತ ಕನಕಾಪುರ, ಎಚ್.ಆರ್. ಲೀಲಾವತಿ ಮುಂತಾದ ಸಂಯೋಜಕರು ಇವರ ಗೀತೆಗಳಿಗೆ ಸಂಗೀತ ಸಂಯೋಜಿಸಿದರು. ಅನುರಾಧಾ ಧಾರೇಶ್ವರ, ಈಶ್ವರಪ್ಪ ಮಿಣಚಿ, ಲತಾ ಜಹಗೀರದಾರ, ಶ್ರೀಕಾಂತ ಕುಲಕರ್ಣಿ, ಸಂಗೀತಾ ಕಟ್ಟಿ, ರೋಹಿಣಿ ಜೋಶಿ ಮುಂತಾದ ಗಾಯಕರು ಇವರ ಶಬ್ದಗಳಿಗೆ ದನಿಯಾದರು. ತತ್‌ಕ್ಷಣದ ಸಂದರ್ಭಗಳನ್ನು ಕವಿತೆಗೆ ಹೊಂದಿಸಬೇಕಾದ ತುರ್ತು ಅಗತ್ಯ ಪೂರೈಸುವ ರಚನೆಕಾರರಾಗಿ, ಹಬ್ಬಹರಿದಿನರಾಷ್ಟ್ರೀಯ ಹಾಗೂ ಸ್ಥಳೀಯ ಉತ್ಸವಗಳಿಗೆ ಬೇಕಾಗುವ ಗೀತೆಗಳನ್ನು ಬರೆದುಕೊಡುವ ಗೀತಕಾರರಾಗಿ ಅವರು ಸಾಕಷ್ಟು ಹೆಸರು ಗಳಿಸಿದರು ಮತ್ತು ಅದರಲ್ಲಿ ತೃಪ್ತಿಯನ್ನೂ ಪಡೆದರು.

ತಾವು ಕವಿಯಾಗಿ ರೂಪುಗೊಳ್ಳಲು ಕಾರಣ ತಾವು ಪ್ರಾಥಮಿಕ ಶಾಲೆಯಲ್ಲಿದ್ದಾಗ ಕಲಿತ ಛಂದಸ್ಸು ಹಾಗೂ ರಾಗತಾಳಗಳ ಜ್ಞಾನವೆಂದು ಅನೇಕ ಸಲ ಅವರು ಹೇಳಿದ್ದರು. ಒಮ್ಮೆ ಧಾರವಾಡ ಆಕಾಶವಾಣಿಯಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತ ಹೀಗೆ ಹೇಳಿದ್ದರು: ‘ನನಗ ಕವನ ಬರೀಲಿಕ್ಕೆ ಪ್ರಥಮ ಪ್ರೇರಣಾ ಅಂತಂದ್ರ ಏಳನೆಯ ಕ್ಲಾಸಿನಲ್ಲಿ ಕಲಿತಂತಹ ಛಂದಸ್ಸು. ಕವಿತಾ ಮ್ಯಾಲಿನ ಶ್ರದ್ಧಾ ಛಂದಸ್ಸಿನ ಮೂಲಕ ಜಾಸ್ತಿಯಾಗ್ತಾ ಬಂತು. ಏಳನೆಯ ಇಯತ್ತೆ ಇದ್ದಾಗ ಎರಡು ಕವನ ಬರೆದಿದ್ದೆ. ಆದರ ಅವನ್ನ ಯಾರಿಗೂ ತೋರಿಸೋ ಧೈರ್ಯ ಮಾಡಿರಲಿಲ್ಲ. ಮುಂದ ಧಾರವಾಡ ಆಕಾಶವಾಣಿಯ ನಾಟಕ ಕಲಾವಿದರಾದಂತಹ ಆರ್.ಜಿ. ಚಿಲಕವಾಡ ಅನ್ನೋ ಗೆಳೆಯರು ನನ್ನ ಕವನ ಮೆಚ್ಚಿಕೊಂಡು ಪ್ರೋತ್ಸಾಹ ಕೊಟ್ಟರು. ಆಗ ನಾನು ಕೂಡ ಕವಿತಾ ಬರೀಬಲ್ಲೆ ಅನ್ನೋ ಧೈರ್ಯ ಹುಟ್ಟಿತು.


ಕವಿತೆ ಕಟ್ಟಿದಷ್ಟೇ ಸಲೀಸಾಗಿ ಮಲ್ಲಕಂಬದ ಕಸರತ್ತು ಮಾಡುತ್ತಿದ್ದ ಕವಿ ಐರಸಂಗರು

ಧಾರವಾಡದಲ್ಲಿ ಎಲ್ಲಿ ಬೇಕಾದಲ್ಲಿ ನಿಂತು ಎತ್ತಬೇಕಾದರತ್ತ ಕಲ್ಲು ಒಗೆದರೂ ಅದು ಒಬ್ಬ ಕವಿಯ ತಲೆಯ ಮೇಲೆಯೇ ಬೀಳುತ್ತದೆ ಎಂಬ ಮಾತು ಹಿಂದೆ, ಬಹುದಿನಗಳವರೆಗೆ, ಪ್ರಚಲಿತದಲ್ಲಿತ್ತು! ಕಲ್ಲು ಒಗೆಯುವವರು ಕೂಡ ಕವಿಗಳೇ ಆಗಿರುತ್ತಾರೆ ಎಂದು ಚೆನ್ನವೀರ ಕಣವಿಯವರು ಸಮಾರಂಭದಲ್ಲೊಮ್ಮೆ ನಗುತ್ತ ಹೇಳಿದ್ದರು! ಅಪರೂಪವೆಂಬಂತೆ ಚೆಂಬೆಳಕಿನ ಕವಿ ಆವತ್ತು ಸ್ವಲ್ಪ ಜೋರಾಗಿಯೇ ನಕ್ಕಿದ್ದರು. ಎಲ್ಲ ಕ್ಷೇತ್ರಗಳಂತೆ ಕಾವ್ಯಕ್ಷೇತ್ರ ಕೂಡ ರಾಜಕೀಯಕ್ಕೆ ಹೊರತಾದುದಲ್ಲ ಎಂಬ ಭಾವ ಪ್ರಾಯಶಃ ಅವರ ಮಾತಿನಲ್ಲಿತ್ತು. ಕವಿಯಾದವನು ಕಾಯಬೇಕಂತೆ, ಕುದಿಯಬೇಕಂತೆ. ತಾಳ್ಮೆ ಮತ್ತು ವಿನೀತಭಾವಕ್ಕೆ ಒಂದು ರೂಪಕವಾಗಿ ಐರಸಂಗ ಬದುಕಿದರು. ಇಂದು ಒಂದೆರಡು ಪುಸ್ತಕ ಪ್ರಕಟಿಸಿದವರು, ತಮಗೆ ಬರಬೇಕಾದುದು ಬಂದಿಲ್ಲವೆಂಬಂತೆ ಇಡೀ ವ್ಯವಸ್ಥೆಯ ವಿರುದ್ಧ ಕಿಡಿ ಕಾರುವುದನ್ನು ನೋಡುವಾಗ ನವೋದಯದ ಹಿರಿಯರು ಎಷ್ಟೆಲ್ಲ ಸಮಾಧಾನದಿಂದ ಬಾಳುತ್ತ ಬಂದರೆಂಬುದರ ಮಹತ್ವ ಮನದಟ್ಟಾಗುತ್ತದೆ. ಐರಸಂಗ ಅವರು ಒಮ್ಮೆಯೂ ತಾನು ಕವಿ ಎನ್ನುವ ಅಹಂನಿಂದ ಬೀಗಿದವರಲ್ಲ. ಕಾವ್ಯ ಮತ್ತು ಕ್ರೀಡೆಗಳನ್ನು ಅವರು ಮೇಳೈಸಿಕೊಂಡ ಬಗೆ ವಿಶಿಷ್ಟವಾಗಿತ್ತು. ಈಜುವುದು, ಸಂಗೀತಲೋಕದಲ್ಲಿ ಮುಳುಗುವುದು, ಮಲ್ಲಕಂಬ ಆಟದಲ್ಲಿ ಮೈದಣಿಸುವುದು ಅವರ ಮೆಚ್ಚಿನ ಹವ್ಯಾಸಗಳಾಗಿದ್ದವು. ಅವರ ಪುಟ್ಟ ಶರೀರ ಇಷ್ಟೆಲ್ಲ ಆಟಗಳಿಗೆ ತಂಗುದಾಣವಾಗಿದ್ದು ವಿಸ್ಮಯವಾಗಿ ತೋರುತ್ತದೆ.

ಐರಸಂಗ ಅವರ ಪ್ರಕೃತಿ ಪ್ರೇಮ ಮತ್ತು ಭಕ್ತಿಗೀತೆಗಳಿಗಿಂತ ಜಾನಪದದ ಸೊಗಡುಳ್ಳ ಅವರ ದೇಸಿಗೀತೆಗಳು ಅವರಲ್ಲಿನ ಕಾವ್ಯಶಕ್ತಿಯನ್ನು ಅನಾವರಣಗೊಳಿಸುತ್ತವೆ. ಸಂಗಮೂರೀಯಂಥಾ ಚೆಲುವೇರ ಮೈಬಣ್ಣ, ಚಿಗರಿಯ ಮರಿಯಂತಾ ಚಿವಗಣ್ಣ, ಕಣ್ಣೀಗಿ ಕಾಡೀಗಿ ಹಚಗೊಂಡ ಮೆರೆದಾವು ಸಿರಿವೆಣ್ಣ ಇಂತಹ ಹಾಡು ಇರಬಹುದು ಇಲ್ಲವೆ ಉತ್ತರ ಕರ್ನಾಟಕದ ಪ್ರಸಿದ್ಧ ಚುರುಮುರಿಯನ್ನು ಅವರು ಬಣ್ಣಿಸಿದ್ದಾಗಿರಬಹುದು: ಚಿಕ್ಕ ಚಿಕ್ಕ ಮಕ್ಕಳೆಲ್ಲಾ ನಕ್ಕ ನಕ್ಕು ತಿನ್ನುವಂತಾ ಚುರಮೋರಿ, ಬಿಸಿ ಚುರಮೋರಿ, ಮುದುಕಾ ಮುದುಕಿ ಕೂಡಿಕೊಂಡು ಬದುಕೂನಂತ ತಿನ್ನುವಂತಾ ಚುರಮೋರಿ, ಹಲ್ಲು ಒಂದೂ ಇಲ್ಲದವರು ಮೆಲ್ಲಕಾಗಿ ತಿನ್ನುವಂತಾ ಬಿಸಿ ಚುರಮೋರಿ, ಸುಗ್ಗೀದಿನಾ ಬಂದಾವೀಗ ಬಿಡವ ಇಲ್ಲ ಹ್ವಾರೇದಾಗ ಹೀಗೆ ಜನಭಾಷೆಯನ್ನು ಕಾವ್ಯದ ಛಂದಸ್ಸಿಗೆ ಹೊಂದಿಸುವ ಶಕ್ತಿ ಹೊಂದಿದ್ದ ಐರಸಂಗ ಅವರು ಇಂತಹ ಹಾಡುಗಳನ್ನು ಕಟ್ಟುತ್ತ ಇನ್ನಷ್ಟು ವಿಸ್ತಾರವಾಗಿ ಬರೆಯಬೇಕಾಗಿತ್ತೆಂದು ಸಾಹಿತ್ಯದ ವಿದ್ಯಾರ್ಥಿಯಾಗಿರುವ ನನ್ನಂತಹವನಿಗೆ ಅನ್ನಿಸುವುದು ಸಹಜವಾಗಿದೆ.

ಐರಸಂಗರ ಸಾಹಿತ್ಯದ ಮರುಓದು, ಅವರು ಕಟ್ಟಿಕೊಡಲು ಯತ್ನಿಸಿದ ಮೌಲ್ಯಗಳ ಶೋಧ ಮುಂತಾದ ವಿಮರ್ಶಾತ್ಮಕ ಕಾರ್ಯಗಳು ಇನ್ನಾದರೂ ಆಗಬೇಕು. ಅಪ್ಪಟ ಕವಿಯೊಬ್ಬನ ನೆನಪನ್ನು ಹಿಗ್ಗಿಸಬೇಕು.

ಪ್ರತಿಕ್ರಿಯಿಸಿ: feedback@sudha.co.in